**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:16-09-2025:**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಆರೋಪಿತರೆಲ್ಲರೂ ಸೇರಿ ಚಾಸಾ-2ರವರಿಗೆ ಹಲ್ಲೆ ಮಾಡಿದ ವಿಚಾರ ಮತ್ತು ಅವರಿಂದ 35ಸಾವಿರ ರೂಪಾಯಿ ಹಣ ಹಾಗೂ ಒಂದು ಉಂಗುರವನ್ನು ಕಿತ್ತುಕೊಂಡ ವಿಚಾರ ನನಗೆ ಗೊತ್ತಿಲ್ಲ. ಕೊಲೆಬೆದರಿಕೆ ಹಾಕಿದ ವಿಚಾರ ಗೊತ್ತಿಲ್ಲ. ಕೆಎ-06-ಬಿ-9706ರ ಆಟೋವನ್ನು ನಾನು ಈ ಹಿಂದೆ ನೋಡಿಲ್ಲ.

2.ಈಗ ತೋರಿಸಿದ ದಾಖಲೆಯಲ್ಲಿರುವ ರುಜು ನನ್ನದೆ. ಸದರಿ ದಾಖಲೆಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎನ್ ಆರ್ ಸರ್ಕಲ್ ಠಾಣೆಯಲ್ಲಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ನಾನು ಮುಬಾರಕ್ ಪಾಷಾ ಎಂಬುವವರ ಬಳಿ ಕೆಎ-13-ಸಿ-8446ರ ಗೂಡ್ಸ್ ವಾಹನದ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದೆನು ಎಂದರೆ ಸರಿ. ಚಾಸಾ-2ರವರ ಜೊತೆ ನಾನು ಆಗಾಗ್ಗೆ ಬಾಡಿಗೆಗೆ ಹೋಗುತ್ತಿದ್ದೆ ಸದರಿಯವರು ದನಗಳ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. 7-6-22ರಂದು ಬೆಳಿಗ್ಗೆ ಹಾಸನದಿಂದ ದನಗಳನ್ನು ಗೂಡ್ಸ್ ವಾಹನಕ್ಕೆ ತುಂಬಿಕೊಂಡು ಹೊಳೆನರಸೀಪುರಕ್ಕೆ ಹೋಗಲು ಹನುಮಂತಪುರ ಕೆಐಎಡಿಬಿ ಸರ್ಕಲ್ ರಸ್ತೆಯಲ್ಲಿ ಹೋಗುತ್ತಿರುವಾಗ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಆಟೋ ಮತ್ತು ಬೈಕ್ ನಲ್ಲಿ ಆರೋಪಿತರು ಬಂದರು ಮತ್ತು ನಾನು ಚಲಾಯಿಸುತ್ತಿದ್ದ ವಾಹನಕ್ಕೆ ಅಡ್ಡಹಾಕಿ ನಿಲ್ಲಿಸಿದರು ಎಂದರೆ ಸರಿಯಲ್ಲ. ಅವರಲ್ಲಿಬ್ಬರು ಮಚ್ಚುಕತ್ತಿ ಹಿಡಿದುಕೊಂಡು ನನ್ನನ್ನು ಹೆದರಿಸಿ ಆಟೋದಲ್ಲಿ ಮಧ್ಯಕ್ಕೆ ಕೂರಿಸಿಕೊಂಡು ಅಲ್ಲಿ ಇಲ್ಲಿ ಸುತ್ತಾಡಿಸಿ ತಣ್ಣೀರುಹಳ್ಳದಂ ಚರ್ಚ್ ಹತ್ತಿರ ಇರುವ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ನನಗೆ ಹೆದರಿಸಿ ಫೋನ್ ಮಾಡಿಸಿ ಚಾಸಾ-

2 ರವರನ್ನು ಸ್ಥಳಕ್ಕೆ ಕರೆಸಿಕೊಂಡರು ಎಂದರೆ ಸರಿಯಲ್ಲ. ಆರೋಪಿತರು ಚಾಸಾ-2ರವರನ್ನು ಸುತ್ತುವರಿದು ಕೈಗಳಿಂದ ಮಚ್ಚುಕತ್ತಿಯಿಂದ ಉಲ್ಟಾ ಮಾಡಿಕೊಂಡು ಚಾಸಾ-2ರವರ ಬೆನ್ನಿಗೆ, ಎಡಕೈಗೆ ಎಡಕಾಲಿಗೆ ಹೊಡೆದು ನೋವುಂಟುಪಡಿಸಿದ್ದಲ್ಲದೆ ಅವರಲ್ಲಿದ್ದ 35ಸಾವಿರ ಹಣ ಮತ್ತು ಒಂದು ಉಂಗುರವನ್ನು ಕಿತ್ತುಕೊಂಡು ಪೊಲೀಸರಿಗೆ ಹೇಳಿದರೆ ಸುಮ್ಮನೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಸ್ಥಳದಿಂದ ಆಟೋ ಮತ್ತು ಸ್ಕೂಟರಿನಲ್ಲಿ ಹೋದರು ಎಂದರೆ ಸರಿಯಲ್ಲ. ಸದರಿ ಆಟೋ ನಂಬರ್ ಕೆಎ-06-ಬಿ-9706 ಆಗಿತ್ತು ಎಂದರೆ ಸರಿಯಲ್ಲ. ನಂತರ ನಾನು ಚಾಸಾ-2ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ವಾಹನ ಮಾಲೀಕರಾದ ಮುಬಾರಕ್ ಪಾಷಾ ರವರಿಗೆ ತಿಳಿಸಿ ನಂತರ ನಿಪಿ-1 ರಂತೆ ದೂರುಕೊಟ್ಟೆನು ಎಂದರೆ ಸರಿಯಲ್ಲ. ಪೊಲೀಸರು ಈ ಸಂಬಂಧವಾಗಿ ದಿನಾಂಕ 8-6-22ರಂದು ಕೃತ್ಯಸ್ಥಳಕ್ಕೆ ಬಂದಿದ್ದರು ಅಲ್ಲಿ ನಾನು ಸ್ಥಳ ತೋರಿಸಿದ ಮೇರೆಗೆ ನನ್ನ ಸಮಕ್ಷಮ ನಿಪಿ-2 ರಂತೆ ಮಹಜರು ಬರೆದು ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ.

2.ದಿನಾಂಕ 11-6-22 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಸಿದರು ಅಲ್ಲಿ 4 ಜನ ಆರೋಪಿತರಿದ್ದರು ಅವರನ್ನು ನಾನು ನೋಡಿ ಗುರುತಿಸಿದೆನು ಎಂದರೆ ಸರಿಯಲ್ಲ.ಅವರು ನ್ಯಾಯಾಲಯದ ಮುಂದಿರುವ 4, 6, 7 ಹಾಗೂ ವಿಸಿಯಲ್ಲಿ ನೋಡುತ್ತಿರುವ 5ನೇ ಆರೋಪಿತರು ಎಂದರೆ ಸರಿಯಲ್ಲ. ಉಳಿದವರೆಲ್ಲರೂ ತಲೆಮರೆಸಿಕೊಂಡಿದ್ದಾರೆ ಎನ್ನುವ ವಿಚಾರ ಪೊಲೀಸರಿಂದ ತಿಳಿಯಿತು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಆರೋಪಿತರು ಘಟನಾ ಸವಮಯದಲ್ಲಿ ಆರೋಪಿತರು ಚಾಸಾ-2ರವರ ಉಂಗುರ ಕಿತ್ತುಕೊಂಡಿಲ್ಲ ಎಂದು ನಾನು ಪೊಲೀಸರ ಮಂದೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-3ಎಂದು ಗುರುತಿಸಲಾಯಿತು.

3.ದಿನಾಂಕ 15-6-22ರಂದು ಮತ್ತೊಮ್ಮೆ ಪೊಲೀಸರು ನನ್ನನ್ನು ಕರೆಸಿ ಅಲ್ಲಿ ಇಮ್ರಾನ್ ವಸೀಮ್ ಅಲಿಯಾಸ್ ವಸೀಮ್ ಪಾಷ ಎಂಬುವವರನ್ನು ದಸ್ತಗಿರಿ ಮಾಡಿದರು, ಅವರನ್ನು ನಾನು ಕೃತ್ಯದ ದಿವಸ ಭಾಗಿಯಾಗಿದ್ದರು ಎಂದು ಹೇಳಿ ಗುರುತಿಸಿ ಪೊಲೀಸರಿಗೆ ಈಗ ಓದಿ ಹೇಳಿದಂತೆ ಹೇಳಿಕ

ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು.

4.ದಿನಾಂಕ 19-6-22ರಂದು ಪೊಲೀಸರು ನನ್ನನ್ನು ಕರೆಸಿ ಅಲ್ಲಿ ಸಿಂಚನ್ ಅಲಿಯಾಸ್ ಸಿಂಚು ಎಂಬುವವರನ್ನು ದಸ್ತಗಿರಿ ಮಾಡಿದರು, ಅವರನ್ನು ನಾನು ಕೃತ್ಯದ ದಿವಸ ಭಾಗಿಯಾಗಿದ್ದರು ಎಂದು ಹೇಳಿ ಗುರುತಿಸಿ ಪೊಲೀಸರಿಗೆ ಈಗ ಓದಿ ಹೇಳಿದಂತೆ ಹೇಳಿಕ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ಕೇಸಿನ ವಿಷಯ ಗೊತ್ತಿದ್ದೂ ಆರೋಪಿತರು ಕೃತ್ಯ ನಡೆಸಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

(ಆರೋಪಿತರ ಪರ ವಕೀಲರು ನ್ಯಾಯಾಲಯದಿಂದ ಹೊರಗುಳಿದಿರುವುದರಿಂದ ಹಾಜರಿರುವ ಆರೋಪಿತರಿಗೆ ಪಾಟೀಸವಾಲು ಮಾಡುತ್ತೀರಾ ಎಂದು ಕೇಳಿದಾಗ ಇಲ್ಲ ಎಂದು ನುಡಿದಿರುತ್ತಾರೆ, ಪಾಟೀಸವಾಲಿಗೆ ಕಾಲಾವಕಾಶ ನೀಡಲು ಸಕಾರಣ ಕಂಡುಬಾರದಿರುವುದರಿಂದ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಗಿದೆ.)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**